ಸಿ.ಸಿ. ನಂ ಃ**90/2025**
ಪಿ.ಡಬ್ಲ್ಯೂ - 01
ಸಿ.ಡಬ್ಲ್ಯೂ - 01

ದಿನಾಂಕಃ **09/03/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ

ನಂತರ ಮಹಮ್ಮದ್ ರಫಿ 4 ನೇ ಆರೋಪಿ ಇವರು ನನ್ನ ಕಡೆಯಿಂದ ಸಹಿ ಮಾಡಿಸಿಕೊಂಡ ಅಗ್ರಿಮೆಂಟ್ ಪತ್ರಗಳನ್ನು ತೆಗೆದುಕೊಂಡು ಬೆಂಗಳೂರಿನ ಆರ್ ಟಿ ನಗರ ಪೊಲೀಸ್ ಸ್ಟೇಷನ್ ನಲ್ಲಿ ನನ್ನ ವಿರುದ್ದ ದೂರು ಕೊಟ್ಟಿದ್ದು ಸದರಿಯವರು ಬೆಂಗಳೂರಿನ ನ್ಯಾಯಾಲಯದಲ್ಲಿ ನಾನು ಅವರಿಗೆ ಹಣ ಕೊಡಬೇಕು ಎಂದು ನನ್ನ ಮೇಲೆ, ನನ್ನ ತಂದೆ , 3 ನೇ ಆರೋಪಿಯ ವಿರುದ್ದ ದೂರು ದಾಖಲಿಸಿರುತ್ತಾರೆ. ನಾನು ಸದರಿ ದೂರನ್ನು ಪ್ರಶ್ನಿಸಿದ್ದು ಅದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನನ್ನ ಮತ್ತು ನನ್ನ ತಂದೆಯ ವಿರುದ್ದ ಸದರಿ ಪ್ರಕರಣ ರದ್ದಾಗಿರುತ್ತದೆ. ನನ್ನ ಬಳಿ ಹೊಸದುರ್ಗದ ಮಠದ ದೊಡ್ಡ ಸ್ವಾಮಿಜೀ ಎಂದು ನನ್ನ ಬಳಿ ಮಾತನಾಡುತ್ತಿದ್ದ ವ್ಯಕ್ತಿಯ ದೂರವಾಣಿ ಸಂಖ್ಯೆಃ 8880503451 ಇದ್ದು, ಆತನು ನನಗೆ ಫೋನ್ ಮಾಡಿ ಜೀವ ಬೆದರಿಕೆ ಹಾಕಿರುತ್ತಾನೆ. ನಾನು ಸದರಿ ಸ್ವಾಮಿಜೀ ಮತ್ತು ಈ ವ್ಯವಹಾರಕ್ಕೆ ಸಂಬಂದಪಟ್ಟಂತೆ ಬಳಸಿದ ದೂರವಾಣಿ ಸಂಖ್ಯೆಃ 9591895415 ಇರುತ್ತದೆ.

2. ದಿಃ26/03/2017 ರಂದು ನಾನು ಪೊಲೀಸ್ ಠಾಣೆಗೆ ಹೋಗಿ ಮುಂದುವರಿದ ಹೇಳಿಕೆಯನ್ನು ಕೊಟ್ಟಿರುತ್ತೇನೆ. ದೂರು ಕೊಡುವ ಕಾಲಕ್ಕೆ ನನ್ನ ಸ್ನೇಹಿತ ಇಂತಿಯಾಸ್ ಇವರೂ ಸಹ ನನಗೆ ಮೋಸ ಮಾಡಿರುತ್ತಾರೆ ಎಂದು ದೂರು ಕೊಟ್ಟಿದ್ದು ತದನಂತರ ಆತನು ಸಹ ಸದರಿ ವ್ಯವಹಾರಕ್ಕೆ ಸಂಬಂದಪಟ್ಟಂತೆ ಆರೂವರೆ ಲಕ್ಷ ಹಣ ತೊಡಗಿಸಿದ್ದು ಆತನಿಗೂ ಸಹ ಮೋಸ ಮಾಡಿರುತ್ತಾರೆ ಎಂದು ನಂತರ ನನಗೆ ಗೊತ್ತಾಗಿದ್ದು ಆ ಸಂಬಂದ ನಾನು ಮರುಹೇಳಿಕೆ ಕೊಟ್ಟಿರುತ್ತೇನೆ.

3. ನನಗೆ ದೊಡ್ಡ ಸ್ವಾಮಿಜೀ ಅಂತ ಹೇಳಿ ನನ್ನ ಜೊತೆ ಫೋನ್ ನಲ್ಲಿ ಮಾತನಾಡಿದ ವ್ಯಕ್ತಿ ರಾಜೇಶ್ ಎಂದು ನನಗೆ ಗೊತ್ತಾಗಿರುತ್ತದೆ. ದಿಃ 26/03/2017 ರಲ್ಲಿ ನಾನು ಎನ್ ಆರ್ ಪುರದ ಕಾರ್ಪೋರೇಷನ್ ಬ್ಯಾಂಕ್ ಬಳಿ ಹೋದಾಗ ರಾಜೇಶನು ಬಂದು ನನ್ನನ್ನು ಮಾತನಾಡಿಸಿದ್ದು,

ನಾನು ನಂದನ್ ಮೇಲೆ ದೂರು ಕೊಟ್ಟಿರುವ ವಿಚಾರ ಗೊತ್ತಾಗಿ ಆತನ ತಮ್ಮ ಈ ಪ್ರಕರಣದಲ್ಲಿ ಇರುವುದಿಲ್ಲ ರಾಜಿ ಮಾಡಿಕೊಳ್ಳೋಣ ಎಂದು ಹೇಳಿದನು ಹಾಗೂ ನನಗೆ ಬರಬೇಕಾದ ಹಣವನ್ನು ನಾನು ವ್ಯವಸ್ಥೆ ಮಾಡಿ ಕೊಡುತ್ತೇನೆ ಎಂದು ಹೇಳಿದನು. ಸದರಿ ರಾಜೇಶನ ಧ್ವನಿಯನ್ನು ಕೇಳಿದಾಗ ಆತನು ನನ್ನ ಬಳಿ ದೊಡ್ಡ ಸ್ವಾಮಿಜೀ ಎಂದು ಮಾತನಾಡಿದ ವ್ಯಕ್ತಿ ಆತನೇ ಇರುತ್ತಾನೆ ಎಂದು ಗೊತ್ತಾಗಿರುತ್ತದೆ. ಆಗ ನಾನು ನೀನೇ ದೊಡ್ಡ ಸ್ವಾಮಿಜೀ ಅಂತ ಹೇಳಿ ನನ್ನ ಬಳಿ ಮಾತನಾಡಿದ್ದೀಯಾ ಎಂದು ಹೇಳಿದೆನು ಹಾಗೂ ಇನೋವಾ ಕಾರಿನಲ್ಲಿ ನಾವು ಹೋಗುವಾಗ ನಮ್ಮನ್ನು ಅಡ್ಡಗಟ್ಟಿದಾಗ ಸಣ್ಣ ಸ್ವಾಮಿಜೀಯ ಜೊತೆ ಸದರಿ ರಾಜೇಶನು ಕಾರಿನಲ್ಲಿ ಕೂತುಕೊಂಡು ಸ್ವಾಮಿಜೀ ವೇಷ ಧರಿಸಿದ್ದು ಆದರೆ ಆತನು ನನಗೆ ದೊಡ್ಡ ಸ್ವಾಮಿಜೀ ಅಂತ ಗೊತ್ತಿರಲಿಲ್ಲ.

4. ಆರೋಪಿತರು ನನಗೆ ಎಲ್ಲಿಯೂ ಸಹ ನನಗೆ ಅನುಮಾನ ಬರದ ರೀತಿ ನನ್ನ ಜೊತೆ ವ್ಯವಹಾರ ಮಾಡಿದ್ದು, ನನಗೆ ಇವರು ಮೋಸ ಮಾಡುತ್ತಾರೆ ಎಂಬ ಅರಿವು ಸಹ ನನಗೆ ಬಂದಿರಲಿಲ್ಲ. ಆರೋಪಿತರು ನನ್ನ ಜೊತೆ ಮಾತನಾಡಿದ ವಿಚಾರಕ್ಕೆ ಸಂಬಂಧಿಸಿದ ಸಿ ಡಿಯನ್ನು ತನಿಖೆಯ ಕಾಲಕ್ಕೆ ಕೊಡುತ್ತೇನೆ ಎಂದು ತಿಳಿಸಿದ್ದೆ. ನಂತರ ನಾನು ರಾಜೇಶನ ವಿರುದ್ಧ ಸಹ ಕ್ರಮ ಕೈಗೊಳ್ಳುವಂತೆ 2 ಬಾರಿ ಮುಂದುವರಿದ ಹೇಳಿಕೆಯನ್ನು ದಿ: 14/04/2019 ರಂದು ಕೊಟ್ಟಿರುತ್ತೇನೆ. ದಿ: 14/09/2019 ರಂದು ಎನ್ ಆರ್ ಪುರ ಪೊಲೀಸ್ ಠಾಣಾ ಆವರಣದಲ್ಲಿ ಕಾರನ್ನು ತಂದು ನಿಲ್ಲಿಸಿದ್ದು, ಟೋಯೋಟಾ ಫಾರ್ಚೂನರ್ ಕಾರ್ ನೋಂದಣಿ ಸಂಖ್ಯೆ: ಕೆಎ 51 ಎಂ ಎ 1040 ಇತ್ತು. ಸದರಿ ಕಾರಿನಲ್ಲಿ 3 ನೇ ಆರೋಪಿ ಮತ್ತು ಆತನ ಸಹಚರರು ಜಾಕೇಟ್ ಮತ್ತು ರೈಸ್ ಪುಲ್ಲಿಂಗ್ ವಸ್ತುವನ್ನು ಪರೀಕ್ಷೆ ಮಾಡುವ ಸಂಬಂದ ಪ್ಯಾಕಿಂಗ್ ಕಿಟ್ಟನ್ನು ಸದರಿ ವಾಹನದಲ್ಲಿ ತರುತ್ತಿದ್ದರು. ಸದರಿ ಕಾರಿನಲ್ಲಿ ಪ್ಯಾಕಿಂಗ್ ಕಿಟ್ಟನ್ನು ಪರೀಕ್ಷೆ ಮಾಡಿಸುವ ಸಂಬಂದ ತೆಗೆದುಕೊಂಡು ಹೋಗುವುದಾಗಿ ಹಾಗೂ ನಾವು ಕಂಪನಿಯ ಕಾರಿನಲ್ಲಿ ಹೋಗುವುದಾಗಿ ತಿಳಿಸಿದರು. ನಂತರ ಸದರಿ ಕಾರನ್ನು ಅಲ್ಲಿಯ ಸಾರ್ವಜನಿಕರು ದೊಡ್ಡ ಸ್ವಾಮಿಜೀ ಕಡೆಯವರು ಅಂತ ಹೇಳಿ ಬಂದು ಅಡ್ಡಗಟ್ಟಿ ತಡೆದು ನಮಗೆ ಹಲ್ಲೆ ಮಾಡಿ ಕಾರಿನ ಹಿಂಭಾಗದ ಗ್ಲಾಸನ್ನು ಒಡೆದಿದ್ದು, ಸದರಿ ಕಾರನ್ನು ನಾನು ಎನ್ ಆರ್ ಪುರ ಪೊಲೀಸ್ ಠಾಣೆಯಲ್ಲಿ ನೋಡಿ ಗುರುತಿಸಿರುತ್ತೇನೆ.

5. ದಿ: 25/03/2017 ರಂದು ಹೊನ್ನೆಕುಡಿಗೆ ಮತ್ತು ಅಂತುವಾನಿಗೆ ಹಾದು ಹೋಗಿರುವ ರಸ್ತೆಯ ಬಳಿ ಚಂಡಿಕೇಶವ ದೇವಸ್ಥಾನದ ಬಳಿ ನಾನು ತೋರಿಸಿದ ಸ್ಥಳದಲ್ಲಿ ಚಾಸಾ 3 ಮತ್ತು 4

ರವರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 10.30 ರಿಂದ 11.15 ವರೆಗೆ ಮಾಡಿ ಆ ಕಾಲಕ್ಕೆ ಕೃತ್ಯ ಸ್ಥಳದ ಭಾವಚಿತ್ರವನ್ನು ಮುಂದಿನ ಕ್ರಮಕ್ಕಾಗಿ ತೆಗೆದಿರುತ್ತಾರೆ.

6. ದಿಃ30/04/2017 ರಂದು ಹೊಸದುರ್ಗದ ಸದ್ಗುರು ಸೇವಾಶ್ರಮ ಸ್ಥಳವನ್ನು ತೋರಿಸಿದ್ದು, ಸದರಿ ಜಾಗದಲ್ಲಿ ರೈಸ್ ಪುಲ್ಲಿಂಗ್ ವ್ಯವಹಾರ ಮಾಡಲು ದೇವರು ಅಪ್ಪಣೆ ಕೊಟ್ಟಿದ್ದಾರೆ ಎಂದು ಹೇಳಿದ ಮೇರೆಗೆ ಸದರಿ ಸ್ಥಳದಲ್ಲಿ ಪೊಲೀಸರು ಮಹಜರು ಜರುಗಿಸಿರುತ್ತಾರೆ. ಆ ಕಾಲಕ್ಕೆ ನನ್ನ ಜೊತೆ ಚಾಸಾ 17 ಮತ್ತು 18 ರವರು ಹಾಜರಿದ್ದು, ಮ.1.00-1.45 ರ ಅವಧಿಯಲ್ಲಿ ಪೊಲೀಸರು ಮಹಜರು ಕ್ರಮ ಜರುಗಿಸಿರುತ್ತಾರೆ.

7. ನಂತರ ರೈಸ್ ಪುಲ್ಲಿಂಗ್ ವಸ್ತು ಇರುವ ಜಾಗ ಹಾಗೂ ನನ್ನ ಮೇಲೆ ಹಲ್ಲೆ ಮಾಡಿದ ಸಂಬಂದ ಪೊಲೀಸರು ಮಹಜರು ಜರುಗಿಸಲು ಬಂದಿದ್ದು ಆ ಕಾಲಕ್ಕೆ ನಾನು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ 17 ಮತ್ತು 18 ರವರ ಸಮಕ್ಷಮ ಮ.2.15-3.30 ರ ಅವಧಿಯಲ್ಲಿ ಮಹಜರು ಕ್ರಮ ಜರುಗಿಸಿ ಭಾವಚಿತ್ರವನ್ನು ತೆಗೆದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿದಾರರು ತಮಗೆ ಹೊಟ್ಟೆ ನೋವು ಇರುವ ಕಾರಣ ಮುಂದುವರಿದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು, ಸಾಕ್ಷಿಯ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯವಿಚಾರಣೆಗೆ ಸಮಯ ನೀಡಲಾಯ್ತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.**

ಸಾಕ್ಷಿದಾರರ ಸಹಿಃ